ಆ) ಉದ್ಭವಿಸುವುದಿಲ್ಲ.

ಭೂ ಮಾಪನ ಇಲಾಖೆಯ ಕಾರ್ಯನಿರ್ವಹಣೆ

2999 - ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಭೂಮಾಪನ ಇಲಾಖೆಯಲ್ಲಿ ಹೆಚ್ಚು ಪ್ರಕರಣಗಳು ಬಾಕಿ ಇದ್ದು ಇದನ್ನು ಖಾಸಗೀಕರಿಸಿ ಇತ್ಯರ್ಥಪಡಿಸುವ ಆಲೋಚನೆ ಸರ್ಕಾರಕ್ಕೆ ಇದೆಯೇ?*

ಆ) *ಹಾಲಿ ಇಲಾಖೆಯಲ್ಲಿರುವ ಸಿಬ್ಬಂದಿ ಎಷ್ಟು? ಪ್ರಕರಣಗಳಿಗೆ ಸಂಬಂಧಪಟ್ಟಂತೆ ಅಗತ್ಯ ಸಿಬ್ಬಂದಿ ಇದ್ದಾರೆಯೇ?*

ಇ) *ಇವರಿಗೆ ಅಗತ್ಯ ತರಬೇತಿ ನೀಡಲಾಗಿದೆಯೇ ಇಲ್ಲವಾದಲ್ಲಿ ತರಬೇತಿ ನೀಡಲು ಹಾಗೂ ಅಗತ್ಯ ಸಿಬ್ಬಂದಿ ಹೊಂದಲು ಕೈಗೊಂಡಿರುವ ಕ್ರಮಗಳೇನು?*

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಕೆಲವು ರೀತಿಯ ಪ್ರಕರಣಗಳನ್ನು ಸರ್ವೆ ಮಾಡುವ ಬಗ್ಗೆ ಖಾಸಗಿ ಸರ್ವೆಯರ್‌ಗಳಿಗೆ ಲೈಸೆನ್ಸ್ ನೀಡುವ ಉದ್ದೇಶ ಇದೆ.

ಆ) 2147, ಅಗತ್ಯವಿರುವಷ್ಟು ಸಿಬ್ಬಂದಿ ಇಲ್ಲ.

ಇ) ಖಾಸಗಿ ಲೈಸೆನ್ಸ್ ಪಡೆದ ಸರ್ವೇಯರ್‌ಗಳಿಗೆ 3 ತಿಂಗಳ ತರಬೇತಿ ನೀಡಲು ಕಾರ್ಯಕ್ರಮ ರೂಪಿಸಿದೆ.

ಕೃಷಿ ಉತ್ಪನ್ನ ಮಾರಾಟ ಮಂಡಳಿ ಕಾರ್ಯನಿರ್ವಹಣೆ

3000 - ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) : ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರೈತರಿಗೆ ಅವರ ಉತ್ಪನ್ನಗಳಿಗೆ ಸರಿಯಾದ ಬೆಲೆ ದೊರಕಿಸಲು "ರೈತ ಬಜಾರ್" ಅಥವಾ ಅಪ್ನ ಬಜಾರ್ ಸ್ಥಾಪಿಸಲು ಏನು ಕ್ರಮ ಕೈಗೊಳ್ಳಲಾಗಿದೆ?*

ಆ) *ಇಂತಹ ಬಜಾರ್ ಸ್ಥಾಪನೆಗಳಿಂದ ಮಾರ್ಕೆಟಿಂಗ್ ಯಾರ್ಡ್‌ಗಳಲ್ಲಿ ರೈತರ ಶೋಷಣೆ, ಮೋಸ, ವಂಚನೆ, ತೂಕದಲ್ಲಿನ ವ್ಯತ್ಯಾಸ ಮುಂತಾದ ಪ್ರಕರಣಗಳನ್ನು ತಡೆಗಟ್ಟಲು ಸಾಧ್ಯ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ರೈತರ ಶೋಷಣೆಯನ್ನು ನಿಯಂತ್ರಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು?*

ಶ್ರೀ ಆರ್. ಬಿ. ತಿಮ್ಮಾಪುರ್ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ರೈತರ ಉತ್ಪನ್ನಗಳಿಗೆ ಸರಿಯಾದ ಬೆಲೆ ದೊರಕಿಸಿ ಕೊಡಲು ರಾಜ್ಯದಲ್ಲಿ ರೈತರ ಸಂತೆಗಳನ್ನು ಸ್ಥಾಪಿಸಲು ತಯಾರಿಸಲಾಗಿರುವ ಯೋಜನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಬಂದಿದೆ.

ಇ) ರೈತರ ಶೋಷಣೆಯನ್ನು ನಿಯಂತ್ರಣಗೊಳಿಸಲು ಪಂಜಾಬನ 'ಆಪ್ನಿ ಮಂಡಿ' 'ಆಂಧ್ರ ಪ್ರದೇಶದ 'ರೈತ ಬಜಾರ್' ಮತ್ತು ತಮಿಳುನಾಡಿನ 'ಉಳ್ಳವರ್ ಸಂತೈ' ಗಳ ಮಾದರಿಯಲ್ಲಿ ಕರ್ನಾಟಕದಲ್ಲಿ ರೈತರ ಸಂತೆಗಳನ್ನು ಸ್ಥಾಪಿಸಲು ಯೋಜನೆಯನ್ನು ತಯಾರಿಸಲಾಗಿದ್ದು ಅದು ಸರ್ಕಾರದ ಪರಿಶೀಲನೆಯಲ್ಲಿದೆ.

ರೈತರಿಗೆ ಕೃಷಿ ಉತ್ಪನ್ನಗಳ ಮೌಲ್ಯ ಹೆಚ್ಚಿಸುವ ವಿಚಾರ

3002 - ಶ್ರೀ ಗುರುಸ್ವಾಮಿ ಎ.ಎಸ್ (ಚಾಮುಂಡೇಶ್ವರಿ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೈತರಿಗೆ ಕೃಷಿ ಉತ್ಪನ್ನಗಳ ಮೇಲೆ ಸರಿಯಾದ ಬೆಲೆ ದೊರೆಯುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಉತ್ಪನ್ನಗಳನ್ನು ಅಮದು ಮಾಡಿಕೊಳ್ಳುವುದರ ಮೇಲೆ ನಿರ್ಬಂಧ ಹೇರಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆಯೇ?

ಇ) ವ್ಯವಸಾಯವನ್ನು ಕೈಗಾರಿಕೆ ಎಂದು ಘೋಷಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆಯೇ?

ಈ) ಕೃಷಿ ಉತ್ಪನ್ನಗಳ ಬೆರೆ ನಿಗಧಿ ಆಯೋಗ ರಚಿಸುವ ಉದ್ದೇಶ ಸರ್ಕಾರಕ್ಕೆ ಇದೆಯೆ?

ಶ್ರೀ ಟಿ.ಬಿ. ಜಯಚಂದ್ರ (ಕೃಷಿ ಸಚಿವರು) :

ಅ) ಹೌದು. ಬೆಳೆಗಳ ಬೆಲೆಯು ಕಡಿಮೆಯಾದಲ್ಲಿ ಕನಿಷ್ಠ ಬೆಂಬಲ ಬೆಲೆಗೆ ಖರೀದಿಸಲು ಸರ್ಕಾರದ ಆದೇಶ ಹೊರಡಿಸಿದೆ.

(ಸಂಖ್ಯೆ: ಎಫ್.ಸಿ.ಎಸ್: 13:ಆರ್.ಪಿಆರ್:2000 ದಿನಾಂಕ: 4-10-2000)

ಆ) ಹೌದು.

ಇ) ಇಲ್ಲ.

ಈ) ಇಲ್ಲ.